# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 22-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಕಾಫಿ ದರ ಹೆಚ್ಚಳ

ಬ್ರೆಜಿಲ್‌ನಲ್ಲಿ ಒಣ ಹವೆಯಿಂದ ಅರೆಬಿಕಾ ಕಾಫಿ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯ ನಿರೀಕ್ಷೆಯಿಂದ ಹಾಗೂ ಜುಲೈನಲ್ಲಿ ರಾಬೆಸ್ಟಾ ಕಾಫಿಯ ಅಗ್ರ ಉತ್ಪಾದಕ ವಿಯೆಟ್ನಾಂನಿಂದ ರಫ್ತು 17.1 ಶೇಕಡಾ (ಜೂನ್ ತಿಂಗಳ ರಫ್ತಿಗೆ ಹೋಲಿಸಿದಾಗ) ಇಳಿಕೆಯಾದ್ದರಿಂದ ದರಗಳು ತೀವ್ರ ಹೆಚ್ಚಳವಾಗಿವೆ. ICI ನಿಗಾದ ಪ್ರಕಾರ ಅರೆಬಿಕಾ ಕಾಫಿ ಇನ್‌ವೆಂಟರಿ ಬಿಗುವಿನಿಂದ ಕೂಡಿದ್ದು 23 ವರ್ಷ ಹಿಂದಿನ ಕನಿಷ್ಠ ಮಟ್ಟವಾದ 571580(1999 ರ ನಂತರ) ಕ್ಕೆ ಇಳಿದಿತ್ತೆನ್ನಲಾಗಿದ್ದು, ಈಗ ಸ್ವಲ್ಪ ಮಟ್ಟಿನ ಪ್ರಗತಿ ಕಂಡಿದೆ. ವಿಯೆಟ್ನಾಂನ ರಾಬೆಸ್ಟಾ ರಫ್ತು ಜುಲೈವರೆಗಿನ ಹಿಂದಿನ 7 ತಿಂಗಳಲ್ಲಿ 17.3 ಶೇಕಡಾ ಹೆಚ್ಚಳ ಕಂಡಿದೆ. ವಿಶ್ವದ 2ನೇ ಅತಿ ಹೆಚ್ಚು ಅರೆಬಿಕಾ ಕಾಫಿ ಉತ್ಪಾದಕ ಕೊಲಂಬಿಯಾದಲ್ಲಿ ಉತ್ಪಾದನೆ ಇಳಿಕೆ ಹಾಗೂ ಪೂರೈಕೆ ಇಳಿಕೆ ಕಾಫಿ ದರ ಹೆಚ್ಚಳಕ್ಕೆ ಪೂರಕವಾಗಿದೆ. ಅಂತರಾಷ್ಟ್ರೀಯ ಕಾಫಿ ಆರ್ಗನೈಜೇಶನ್ (ICO) ಪ್ರಕಾರ ಜಾಗತಿಕ ಕಾಫಿ ರಫ್ತು ಜೂನ್‌ನಲ್ಲಿ 1.3 ಶೇಕಡಾ ಹೆಚ್ಚಳ (ಹಿಂದಿನ ವರ್ಷದ ಜೂನ್‌ಗಿಂತ) ಹಾಗೂ ಅಕ್ಟೋಬರ್ 2021 ರಿಂದ ಜೂನ್ 2022 ರ ತನಕ 0.5 ಶೇಕಡಾ ಹೆಚ್ಚಳ(ಹಿಂದಿನ ವರ್ಷ ಈ ಅವಧಿಗಿಂತ) ವಾಗಿ 98.77 ಮಿಲಿಯನ್ ಚೀಲಗಳಾಗಿವೆಯೆನ್ನಲಾಗಿದೆ. ಹೊಂಡುರಾಸ್‌ನಿಂದಲೂ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ. ಬ್ರೆಜಿಲ್‌ನ ಜುಲೈ ಕಾಫಿ ರಫ್ತು ಹಿಂದಿನ ವರ್ಷದ ಜುಲೈಗಿಂತ 16 ಶೇಕಡಾ ಇಳಿಕೆಯಾಗಿ 2.17 ಮಿಲಿಯನ್ ಚೀಲಗಳಾಗಿವೆಯೆನ್ನಲಾಗಿದೆ.

## ಶ್ರಾವಣದಿಂದ ನವರಾತ್ರಿ ತನಕ ಮೊಟ್ಟೆ ಹಾಗೂ ಕೋಳಿ ದರ ಇಳಿಕೆ

ಹಿಂದಿನ ಅನುಭವದಂತೆ ಪ್ರತಿವರ್ಷ ಶ್ರಾವಣದಿಂದ ನವರಾತ್ರಿ ತನಕ ಮೊಟ್ಟೆ ಹಾಗೂ ಕೋಳಿದರಗಳು ಇಳಿಕೆಯಾಗುತ್ತಿವೆ. ಈ ವರ್ಷ ದರ ಇಳಿಕೆಯಾಗಬಹುದೆನ್ನಲಾಗಿದೆ. ನಿರ್ವಹಣಾ ವೆಚ್ಚ ಹೆಚ್ಚಳದಿಂದ ಹಾಗೂ ದರ ಇಳಿಕೆಯಾದಾಗ ಫಾರ್ಮರುಗಳು ತೀವ್ರ ಸಮಸ್ಯೆಯನ್ನೆದುರಿಸುತ್ತಾರೆನ್ನಲಾಗಿದೆ. ಫೀಡ್ಸ್ ದರ ಹೆಚ್ಚಳ, ಸಾಗಾಣಿಕೆ ದರ ಹೆಚ್ಚಳ ಇತ್ಯಾದಿಗಳು ವ್ಯವಹಾರಕ್ಕೆ ಬಹಳ ಕಷ್ಟಕರವಾಗಿದೆ. ತೀವ್ರ ದರ ವ್ಯತ್ಯಾಸವು ಬಹಳ ನಕಾರತ್ಮಕ ಪರಿಣಾಮಕಾರಿಗಳಾಗಿವೆ. ಬ್ರಾಯ್ಲರ್ ದರ ಇಳಿಮುಖವಾಗುತ್ತಿದೆ. ಜುಲೈ 1 ಕ್ಕೆ ರೂ 119 ಜುಲೈ ಅಂತ್ಯಕ್ಕೆ ರೂ.76 ಕೆ.ಜಿ ಗೆ ಇಳಿಯುತ್ತಿದೆಯೆಂದು ಪೌಲ್ಟ್ರಿ ಫೆಡರೇಶನ್ ಆಫ್ ಇಂಡಿಯಾ ಹೇಳಿದೆ. ಮೊಟ್ಟೆ ದರವೂ 20 ರಿಂದ 25 ಶೇಕಡಾ ಕುಸಿತ ಕಂಡಿದೆಯೆಂದು ಹೇಳಲಾಗಿದೆ.